ಓ ಎಸ್ ನಂ.**324/2013**
ಪಿಡಬ್ಲ್ಯೂ.**2**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **08.08.2024**

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲು ಃ ಶ್ರೀ ಎಲ್ ಎಸ್ ವಕೀಲರಿಂದಃ–

ಈ ಕೇಸನ್ನು ಯಾರು ಯಾರ ಮೇಲೆ ಯಾವ ಉದ್ದೇಶಕ್ಕಾಗಿ ಹಾಕಿದ್ದಾರೆಂದು ನನಗೆ ಹೇಳಲು ಆಗುವುದಿಲ್ಲ. ನನಗೆ ಈ ಕೇಸಿನಲ್ಲಿ ಸಾಕ್ಷಿ ನುಡಿಯುವಂತೆ ಬಾಲಾಜಿ ವಕೀಲರು ಕರೆದಿರುತ್ತಾರೆ. ಸದರಿ ವಕೀಲರನ್ನು ಹೊರತುಪಡಿಸಿ ನನ್ನನ್ನು ಈ ಕೇಸಿನ ವಾದಿಯಾಗಲೀ ಪ್ರತಿವಾದಿಯಾಗಲೀ ಸಾಕ್ಷಿ ಹೇಳಲು ಕರೆದಿರುವುದಿಲ್ಲ. ನನಗೆ ದಿನಾಂಕಃ **08.08.2024** ರಂದು ಕೇಸು ಇದೆ ಎಂದು ಹೇಳಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಯಾರು ಹೇಳಿ ಬರೆಸಿದ್ದಾರೆ ಎಂದರೆ ಗೊತ್ತಿಲ್ಲ. ಪ್ರಮಾಣ ಪತ್ರ ತಯಾರಿಸಲು ನಾನು ಯಾರಿಗೂ ಮಾಹಿತಿ ಕೊಟ್ಟಿಲ್ಲ. ಈ ಕೇಸು ಯಾವ ಸರ್ವೆ ನಂಬರಿಗೆ ಸಂಬಂದಿಸಿದ್ದು ಎಂದು ಗೊತ್ತಿಲ್ಲ. ದಿನಾಂಕಃ **07.09.2012** ರಂದು ನನ್ನನ್ನು ವಾದಿಯು ಕರಾರು ಪತ್ರಕ್ಕೆ ಸಾಕ್ಷಿಯಾಗುವಂತೆ ಕರೆದಿರುತ್ತಾರೆ. ಆ ದಿನ ಪ್ರತಿವಾದಿಯರು ವಾದಿಗೆ ಜಮೀನಿನ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ನನ್ನ ಮುಂದೆ ವಾದಿ ಮತ್ತು ಪ್ರತಿವಾದಿಯರು ಯಾವುದೇ ಮಾತುಕತೆ ನಡೆಸಿರುವುದಿಲ್ಲ. ದಾವಾ ಆಸ್ತಿಗೆ ಯಾವ ಬೆಲೆ ನಿಗಧಿಯಾಗಿತ್ತು ಎಂದರೆ ಗೊತ್ತಿಲ್ಲ. ಆ ದಿನ ವಾದಿ ಜೊತೆ ಯಾರು ಯಾರು ಬಂದಿದ್ದರು ಎಂದರೆ ಗೊತ್ತಿಲ್ಲ. ಪ್ರತಿವಾದಿಯರ ಜೊತೆ ಯಾರು ಯಾರು ಬಂದಿದ್ದರು ಎಂದರೆ ಗೊತ್ತಿಲ್ಲ.

ದಿನಾಂಕಃ **07.09.2012** ರಂದು **12.00** ಗಂಟೆಯಿಂದ **1.00** ಗಂಟೆಯವರೆಗೆ ಕರಾರು ಪತ್ರವಾಗಿರುತ್ತದೆ. ನನಗೆ ವೈಯಕ್ತಿಕವಾಗಿ ಕೆಲಸ ಇದ್ದ ಕಾರಣ ಸ್ಟಾಂಪ್ ವೆಂಡರ್ ಹತ್ತಿರ ಹೋಗಿದ್ದೆ. ಸ್ಟಾಂಪ್ ವೆಂಡರ್ ಕಚೇರಿಯಿಂದ ಎಷ್ಟು ಗಂಟೆಗೆ ಹೊರಗೆ ಹೋದೆವು ಎಂದರೆ ನೆನಪಿಲ್ಲ. ಸ್ಟಾಂಪ್ ವೆಂಡರ್ ಚಂದ್ರಶೇಖರ್ ರವರು ಕರಾರು ಪತ್ರವನ್ನು ತಯಾರು ಮಾಡಿದರು. ವಾದಿ ಹಾಗೂ ಚಂದ್ರಶೇಖರ್ ಸೇರಿ

ಕರಾರು ಪತ್ರ ತಯಾರು ಮಾಡಿದ್ದರು ಅದಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದೇನೆ. ಚಂದ್ರಶೇಖರ್ ರವರ ಕಚೇರಿಯ ವಿಸ್ತೀರ್ಣ ನನಗೆ ಹೇಳಲು ಆಗುವುದಿಲ್ಲ. ಆ ದಿನ ಅವರ ಕಚೇರಿಯಲ್ಲಿ ಸುಮಾರು **7-8** ಜನ ಇದ್ದರು.

ನನ್ನ ಮುಂದೆ ವಾದಿಯು **1** ನೇ ಪ್ರತಿವಾದಿಗೆ **12** ಲಕ್ಷ ಹಣ ಕೊಟ್ಟಿದ್ದಾರೆ. ಅದನ್ನು ನಾನು ಖುದ್ದಾಗಿ ನೋಡಿರುತ್ತೇನೆ. ಸದರಿ ಹಣವನ್ನು ಯಾರು ಎಲ್ಲಿಂದ ತಂದಿರುತ್ತಾರೆ ಎಂದರೆ ಗೊತ್ತಿಲ್ಲ ಆದರೆ ವಾದಿಯೇ ಕೊಟ್ಟಿರುತ್ತಾರೆ. **2** ನೇ ಪ್ರತಿವಾದಿಯ ತಮ್ಮನ ಹೆಸರು ಹನುಮಂತರಾಜು ಎಂದರೆ ಗೊತ್ತಿಲ್ಲ. ಸದರಿ ಹನುಮಂತರಾಜು ರವರು ಸುಧಾ ಕೋ ಆಪರೇಟಿವ್ ಬ್ಯಾಂಕಿನ ಡೈರೆಕ್ಟರ್ ಆಗಿದ್ದರು ಎಂದರೆ ಗೊತ್ತಿಲ್ಲ. ವಾದಿಯ ಅಕ್ಕನ ಅಳಿಯ ಅದೇ ಬ್ಯಾಂಕಿನಲ್ಲಿ ಮ್ಯಾನೇಜರ್ ಆಗಿದ್ದರು ಎಂದರೆ ಗೊತ್ತಿಲ್ಲ. **2** ನೇ ಪ್ರತಿವಾದಿಯ ತಮ್ಮ ಹನುಮಂತರಾಜು ಮತ್ತು ವಾದಿಯ ಅಕ್ಕನ ಅಳಿಯ ಸೇರಿ ಬ್ಯಾಂಕಿನ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದರು ಈ ಬಗ್ಗೆ ಪ್ರಥಮ ವರ್ತಮಾನ ವರದಿ ಸಲ್ಲಿಸಲಾಗಿತ್ತು ಎಂದರೆ ಗೊತ್ತಿಲ್ಲ. ಆ ಸಮಯದಲ್ಲಿ **2** ನೇ ಪ್ರತಿವಾದಿಯ ತಮ್ಮನನ್ನು ಕೂಡಿ ಹಾಕಿ ಬಲವಂತವಾಗಿ ಪ್ರತಿವಾದಿಯರನ್ನು ಕರೆದುಕೊಂಡು ಬಂದು ಖಾಲಿ ಛಾಪಾ ಕಾಗದದ ಮೇಲೆ ವಾದಿ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕಃ **07-09-2012** ರಂದು ವಾದಿಯಾಗಲೀ ಪ್ರತಿವಾದಿಯರಾಗಲೀ ಕ್ರಯ ಕರಾರು ಪತ್ರ ಮಾಡಿಕೊಡಲು ಬಂದಿರಲ್ಲಿ ಆದರೆ ಸದರಿ ಪತ್ರವನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನನಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಕೂಡ ಹಾಗೂ ಪ್ರಮಾಣ ಪತ್ರದಲ್ಲಿ ಅಂಶದ ಬಗ್ಗೆ ಮಾಹಿತಿ ಇಲ್ಲದೇ ಇದ್ದರೂ ಕೂಡ ವಾದಿಯು ನನ್ನ ಸ್ನೇಹಿತರಾಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**ಓ ಎಸ್ ನಂ.324/2013**
**ಪಿಡಬ್ಲ್ಯೂ.2**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಶಿಲ್ಪಾ.ಹೆಚ್.ಎ)
ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.